


# ಆದಿಚುಂಚನಗಿರಿ

ಮಾರ್ಚಿ 1994



ಜಾನಪದ ಲೋಕ ಪ್ರವೇಶೋತ್ಸವ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಿರುವುದು. ಸಮಾರಂಭದಲ್ಲಿ (ಎಡದಿಂದ ಬಲಕ್ಕೆ) ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಹೆಚ್. ವಿಶ್ವನಾಥ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರು, ಜಾನಪದ ಪರಿಷತ್ತಿನ ಅಧ್ಯಕ್ಷರಾದ ಡಾ|| ಹೆಚ್.ಎಲ್. ನಾಗೇಗೌಡರು ಹಾಗೂ ನಿವೃತ್ತ ಜಿಲ್ಲಾಧಿಕಾರಿಗಳವರಾದ ಶ್ರೀ ಬಿ.ಎಲ್. ಲಕ್ಕೇಗೌಡರು.

# ಅದ್ಭುತ ಪ್ರತಿಭೆಯ ಅಭಿನವಗುಪ್ತ

ಡಾ|| ಸಿದ್ಧಯ್ಯ ಪುರಾಣಿಕ

'ಬಹುಮುಖ ಪ್ರತಿಭೆ' ಎಂಬ ವಿಶೇಷ ಈಗ ಸಾಮಾನ್ಯ. ಆದರೆ ನಿಜವಾದ ಅರ್ಥದಲ್ಲಿ ಬಹುಮುಖ ಪ್ರತಿಭೆಯನ್ನು ಮೆರೆದ ಮಹಾ ಮಾನವರ ಸಂಖ್ಯೆ ದೊಡ್ಡದಿಲ್ಲ. ಅದರಲ್ಲಿಯೂ ಅದ್ಭುತ ಪ್ರತಿಭೆ, ಪೂರ್ಣ ಪ್ರತಿಭೆ, ಪ್ರಚಂಡ ಪ್ರತಿಭೆ ಪ್ರಕಟಿಸಿದವರು ಇನ್ನೂ ವಿರಳ. ಅಲ್ಲೊಬ್ಬ ಅರಿಸ್ಟಾಟಲ್, ಇನ್ನೊಬ್ಬ ಲಿಯನಾರ್ಡೋಡವಿನ್ಸಿ, ಇಲ್ಲೊಬ್ಬ ಅಮೀರ ಖುಸ್ರೋ- ಹೀಗೆ ಬೆರಳೆಣಿಕೆಯ ಜನರನ್ನು ಹೆಸರಿಸಬಹುದು. ಅಭಿನವಗುಪ್ತ ಇಂಥ ವಿರಳರಲ್ಲಿ ಒಬ್ಬ. ಎಲ್ಲ ಶೈವಶಾಖೆಗಳಿಗೆ ಏಕಮೇವ ಆಚಾರ್ಯನೆಂದು ಆಗ ಅಂಗೀಕೃತನಾಗಿದ್ದ, ಜೀವನ್ಮುಕ್ತನೆಂದು ಕೀರ್ತಿತನಾಗಿದ್ದ ಇವನ ಕೊಡುಗೆ ಅನನ್ಯ.

ಸುದೈವದಿಂದ ಇವನ ಕೆಲವು ಜೀವನ ವಿವರಗಳು ಲಭ್ಯ. ಇವನು ಶ್ರೀ ಶಂಕರಾಚಾರ್ಯರ ಸಮಕಾಲೀನನಾಗಿದ್ದ ಶಾಕ್ತ ಅಭಿನವಗುಪ್ತನಲ್ಲ. ಇವನ ಪೂರ್ವಜರಲ್ಲಿ ಪ್ರಸಿದ್ಧನಾದವನು ಅತ್ರಿಗುಪ್ತ. ಅನೇಕ ಜ್ಞಾನಶಾಖೆಗಳಲ್ಲಿ ಪರಿಣಿತ ಕಾಶ್ಮೀರದ ರಾಜ ಲಲಿತಾದಿತ್ಯ (725-761)ನಿಂದ ಸನ್ಮಾನಿತ. ಆದರೆ ಇವನ ತರುವಾಯ ಸುಮಾರು ಒಂದೂವರೆ ಶತಮಾನಗಳವರೆಗೆ ಈ ವಂಶದ ಬಗ್ಗೆ ಯಾವ ವಿವರಗಳೂ ಉಪಲಬ್ಧವಿಲ್ಲ. ಒಮ್ಮೆಗೆ ಅಭಿನವಗುಪ್ತನ ಅಜ್ಜ ಪ್ರಸಿದ್ಧ ಪಂಡಿತ ವರಾಹಗುಪ್ತ ಕಾಣಿಸಿಕೊಳ್ಳುತ್ತಾನೆ. ಒಂದು ಮಾತು ಮಾತ್ರ ಸುನಿಶ್ಚಿತವೆಂದು ತೋರುತ್ತಿದೆ. ಈ ವಂಶದಲ್ಲಿ ಪಾಂಡಿತ್ಯದ ಪರಂಪರೆಗೆ ಚ್ಯುತಿ ಬರಲಿಲ್ಲ.

ಅಭಿನವಗುಪ್ತನ ತಂದೆ ನರಸಿಂಹ ಗುಪ್ತನೂ ಸರ್ವಶಾಸ್ತ್ರಪಾರಂಗತ, ಪರಶಿವನ ಪರಮಭಕ್ತ, ತಾಯಿಯ ಹೆಸರು ವಿಮಲಕಲಾ, ಮುಗ್ಧ ಭಕ್ತಿಯ ಸಾಧ್ವಿ. ಆಗ ಅದು ಕಾಶ್ಮೀರದಲ್ಲಿ ಧಾರ್ಮಿಕ ವಾತಾವರಣ ದಟ್ಟವಾಗಿದ್ದ ಕಾಲ; ಅಭಿನವಗುಪ್ತ ಹುಟ್ಟಿದ್ದು ಧಾರ್ಮಿಕತೆಯ ಸಾಂದ್ರ ಪ್ರಭಾವ ಪಡೆದಿದ್ದ ವಂಶದಲ್ಲಿ, ಅಂತೆಯೇ ಚಿಕ್ಕವಯಸ್ಸಿನಲ್ಲಿಯೇ ಜ್ಞಾನಮೇರು ವೆನಿಸುವುದು ಇವನಿಗೆ ಸಾಧ್ಯವಾಯಿತು. ಪ್ರಾಯಶಃ 950-960ರ ಮಧ್ಯದಲ್ಲಿ ಜನ್ಮಿಸಿರಬಹುದಾದ ಇವನು ಎಷ್ಟು ಖ್ಯಾತ ಗುರುಗಳಿಂದ ಎಷ್ಟು ಜ್ಞಾನಶಾಖೆಗಳಲ್ಲಿ ಪ್ರಾವೀಣ್ಯ ಪಡೆದ, ಎಷ್ಟು ಅನರ್ಘ್ಯಕೃತಿಗಳನ್ನು ರಚಿಸಿದ, ಎಷ್ಟು ಶಿಷ್ಯರಿಗೆ ಜ್ಞಾನದಾನ ಮಾಡಿದ ಎಂಬುದನ್ನು ಗಮನಿಸಿದರೆ ವಿಸ್ಮಯಾಂಚಿತ ರಾಗುತ್ತೇವೆ.

ಅಭಿನವಗುಪ್ತನ ಜ್ಞಾನತೃಷೆ ಅಗಾಧವಾದುದು. ವೈದಿಕ, ವೈದಿಕ-ತಾಂತ್ರಿಕ, ತಾಂತ್ರಿಕ, ತಾಂತ್ರಿಕ-ವೈದಿಕ ಧರ್ಮಗಳನ್ನು ಆಳವಾಗಿ ಅಭ್ಯಸಿಸುವುದಲ್ಲದೆ ಜೈನ ಬೌದ್ಧ ಧರ್ಮಗಳ ಅಧ್ಯಯನವನ್ನೂ ಅಷ್ಟೇ ಆಸಕ್ತಿಯಿಂದ ಮಾಡಿದವನು. ಅವನ ಹೆರೆಹಿಂಗದ ಜ್ಞಾನದ ಹಸಿವೆ ಅವನನ್ನು ತನ್ನ ಸುಂದರ ಸ್ವದೇಶವನ್ನೂ ಬಿಟ್ಟು ಬೇರೆ ರಾಜ್ಯಗಳಿಗೆ ಗುರುಗಳನ್ನು ಅರಸಿಕೊಂಡು ಹೋಗುವಂತೆ ಮಾಡಿತು. ತಂದೆಯಿಂದ ವ್ಯಾಕರಣವನ್ನು ಕಲಿತಿದ್ದ ಅವನು ವಾಮನಾಥ ನಿಂದ ದ್ವೈತ ತಂತ್ರಗಳನ್ನೂ ಭೂತಿ ರಾಜನಿಂದ ಬ್ರಹ್ಮವಿದ್ಯೆಯನ್ನೂ, ಭೂತಿರಾಜ ತನಯನಿಂದ ದ್ವೈತಾದ್ವೈತ ಶೈವದರ್ಶನವನ್ನೂ, ಲಕ್ಷ್ಮಣ ಗುಪ್ತನಿಂದ ಕ್ರಮ ಮತ್ತು ತ್ರಿತ ದರ್ಶನವನ್ನೂ ಇಂದುರಾಜನಿಂದ ಧ್ವನಿ ತತ್ತ್ವವನ್ನೂ, ಭಟ್ಟತೋತನಿಂದ ನಾಟ್ಯಶಾಸ್ತ್ರ ವನ್ನೂ, ಶ್ರೀಚಂದ್ರ, ಭಕ್ತವಿಲಾಸ, ಯೋಗಾನಂದ, ಚಂದ್ರವರ, ಅಭಿನಂದ, ಶಿವಭಕ್ತಿ, ವಿಚಿತ್ರಾನಂದ, ಧರ್ಮ, ಶಿವ, ವಾಮನ, ಉದ್ಭಟ, ಭೂರಿದ, ಭಾಸ್ಕರಾದಿ ಗಳಿಂದ ಬೇರೆ ಬೇರೆ ವಿಷಯಗಳನ್ನು ಕಲಿತನು. ಶಂಭುನಾಥ ನಿಂದ ತೌಲಿಕ ಸಾಹಿತ್ಯ, ಸಾಧನ ಕ್ರಮಗಳನ್ನು ಕಲಿತ ಅವನಿಗೆ ಆತ್ಮದರ್ಶನ ಸಿದ್ಧಿಸಿತು. ತತ್ಕ ವಾಮನಗುಪ್ತನಿಂದಲೂ ಕಲಿತದ್ದುಂಟು. ಪರಿವಾರಕ್ಕೆ ಪರಿವಾರವೇ ಪಂಡಿತರ ಪರಿವಾರ.

ಆದರೆ ಬಾಲ್ಯದಲ್ಲಿಯೇ ತಾಯಿ ತೀರಿ ಹೋದಳು. ತಾಯಿಯನ್ನು ಬಹುವಾಗಿ ಪ್ರೀತಿ ಸುತ್ತಿದ್ದ ಅವನಿಗೆ ಆದ ಆಘಾತ ಊಹಾತೀತ. ಅದಿಷ್ಟೂ ಸಾಲದೆಂಬಂತೆ ಇನ್ನೂ ಯುವಾವಸ್ಥೆ ಯಲ್ಲಿಯೇ ತಂದೆ ಸಂನ್ಯಾಸ ಸ್ವೀಕರಿಸಿ ಬಿಟ್ಟ. ಶಿವನೇ ಗತಿಯಾಗಿಬಿಟ್ಟ ಅವನಿಗೆ. ಮದುವೆಯಾಗಕೂಡದೆಂದು ನಿರ್ಧರಿಸಿ ಬಿಟ್ಟ. ತನ್ನ ಆಗಮಿಕ ಗುರುಗಳ ಮನೆಯಲ್ಲಿಯೇ ವಾಸಮಾಡತೊಡಗಿದ. ಹೊರಬಿದ್ದಿತು ಅವನ ಉದ್ಭಕೃತಿ, ತಂತ್ರಾಲೋಕ;- ಸಮಸ್ತ ತಂತ್ರಗಳ ಸಾರಸರ್ವಸ್ವ:

ಜಿತೇಂದ್ರಿಯತ್ವ, ಯೋಗಸಾಧನೆ, ನಿರಾಡಂಬರ ಸರಳ ಜೀವನ ಆನುಭಾವಿಕ ಚಿಂತನೆ, ಬಹು ವಿಷಯ ಪಾರಂಗತೆಗಳು ಸ್ವತಃ ಅವನೇ 'ಪರಮಾರ್ಥಸಾರ'ದ ಕೊನೆಯಲ್ಲಿ 'ಅಭಿನವಗುಪ್ತೇನ ಶಿವಚರಣ ಸ್ಮರಣ ದೀಪ್ತೇನ' ಎಂದು ಹೇಳಿಕೊಳ್ಳಲು ಕಾರಣ ಗಳಾದುವು. ಮಾನವನು ಪರಶಿವಸ್ವರೂಪಿ ಯಾಗಲು ಪಂಚ ಸೂತ್ರಗಳನ್ನವನು ಹೇಳಿದ್ದಾನೆ.

(೧)ರುದ್ರನಲ್ಲಿ ನಿಶ್ಚಲಭಕ್ತಿ, ನಿಸ್ಸೀಮ ಭಕ್ತಿ (೨)ಮಂತ್ರಸಿದ್ಧಿ (೩) ಇಂದ್ರಿಯ ವಿಜಯ (೪) ಇಷ್ಟ ಸಿದ್ಧಿಯ ಸಾಮರ್ಥ್ಯ (೫) ಸರ್ವಶಾಸ್ತ್ರಗಳ ಹಠಾತ್ ಜ್ಞಾನ ಇವೆಲ್ಲವನ್ನೂ ಕರತಲಾಮಲಕ ಮಾಡಿಕೊಂಡ ಮಹಾನುಭಾವ ಅಭಿನವಗುಪ್ತ. ಅಂತೆಯೇ ಅವನ ಶಿಷ್ಯ ಮಧುರಾಜ ಯೋಗಿನ್ ತನ್ನ ಗುರು ಅಭಿನವ ಗುಪ್ತನನ್ನು 'ಅಭಿನವಗುಪ್ತರೂಪಿ ದೇವಾಧಿ ದೇವ ದಕ್ಷಿಣಾಮೂರ್ತಿಯೆಂದೂ ಶ್ರೀಕಂಠನ ಅವತಾರವೆಂದೂ ವರ್ಣಿಸಿದ್ದಾನೆ-ತನ್ನ 'ಧ್ಯಾನ ಶ್ಲೋಕಃ' ಎಂಬ ಕೃತಿಯಲ್ಲಿ ಅವನ ಕೆಳಗಣ ಕೃತಿರಾಶಿಯನ್ನು ಗಮನಿಸಿದರೆ ಮಧು ರಾಜನ ಈ ವರ್ಣನೆ ಅತ್ಯುಕ್ತಿಯಲ್ಲವೆನ್ನಿಸುತ್ತದೆ.

(೧) ಬೋಧ ಪಂಚದಶಿಕಾ (೨) ಮಾಲಿನಿ ವಿಜಯವಾರ್ತಿಕ (೩) ಪರಾತ್ರಿಂಶಿಕ ವಿವರಣೆ (೪) ತಂತ್ರಸಾರ (೫) ಧ್ವನ್ಯಾಲೋಕ ಲೋಚನ (೬) ಅಭಿನವ ಭಾರತಿ (೭) ಭಗವದ್ಗೀತಾರ್ಥ ಸಂಗ್ರಹ (೮) ಪರಮಾರ್ಥ ಸಾರ(೯) ಈಶ್ವರ ಪ್ರತ್ಯಭಿಜ್ಞಾವಿವೃತ್ತಿ ವಿಮರ್ಶಿನಿ (೧೦) ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನಿ (೧೧)

ಘಟಕರ್ಪರಕುಲಕ ವಿವೃತ್ತಿ (೧೨) ಕ್ರಮಸ್ತೋತ್ರ (೧೩) ದೇಹಸ್ಥ ದೇವತಾ ಚಕ್ರಸ್ತೋತ್ರ (೧೪) ಭೈರವಸ್ತೋತ್ರ (೧೫) ಪರಮಾರ್ಥ ದ್ವಾದಶಿಕಾ (೧೬) ಪರಮಾರ್ಥ ಚರ್ಚಾ (೧೭)ಅನುತ್ತರಾಸ್ತಿಕಾ (೧೮) ಅನುಭವ ನಿವೇದನ (೧೯) ಮಹೋಪದೇಶವಿಂಶತಿಕ (೨೦) ರಹಸ್ಯ ಪಂಚದಶಿಕಾ (೨೧) ತಂತ್ರೋಚ್ಚಯ (೨೨) ಕ್ರಮಕೇಲಿ (೨೩) ಶಿವದೃಷ್ಟ್ಯಾಲೋಚನ (೨೪) ಪೂರ್ವಪಂಚಿಕಾ (೨೫) ಪದಾರ್ಥ ಪ್ರವೇಶ ನಿರ್ಣಯಟೀಕಾ (೨೬) ಪ್ರತೀರ್ಣಕವಿವರಣ (೨೭) ಕಾವ್ಯಕೌತುಕ ವಿವರಣ (೨೮), ಕಥಾಮುಖ ತಿಲಕ(೨೯) ಭೇದವಾದ ವಿದಾರಣೆ (೩೦) ದೇವೀಸ್ತೋತ್ರ ವಿವರಣ (೩೧) ತತ್ತ್ವಾಧ್ವ ಪ್ರಕಾಶಿಕಾ (೩೨) ಶಿವಶಕ್ತ್ಯವಿನಾ ಭಾವ ಸ್ತೋತ್ರ (೩೩) ಬಿಂಬ ಪ್ರತಿಬಿಂಬವಾದ (೩೪)ಪರಮಾರ್ಥ ಸಂಗ್ರಹ (೩೫) ಅನುತ್ತರಾ ಶತಕ (೩೬) ನಾಟ್ಯಲೋಚನ (೨೭) ಪ್ರಕರಣ ಸ್ತೋತ್ರ (೩೭) ಅನುತ್ತರಾ ತತ್ತ್ವವಿಮರ್ಶಿನೀ ವೃತ್ತಿ-ಇನ್ನು ಹಲವು ಕೃತಿಗಳು.

ಇವುಗಳಲ್ಲಿ ತಂತ್ರಾಲೋಕ, ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನಿ, ಧ್ವನ್ಯಾಲೋಕ ಲೋಚನ, ಅಭಿನವಭಾರತಿ ಗ್ರಂಥಗಳು ಶೈವದರ್ಶನ, ಆನಂದವರ್ಧನನ ಧ್ವನಿತತ್ವ ಮತ್ತು ಭರತಮುನಿಯ ನಾಟ್ಯಶಾಸ್ತ್ರಗಳನ್ನು ಅರಿತುಕೊಳ್ಳಲು ಆಕರಗ್ರಂಥಗಳು. ಭಗವದ್ಗೀತಾರ್ಥ ಸಂಗ್ರಹವು ಶೈವ ದೃಷ್ಟಿ ಕೋನದಿಂದ ಮಾಡಿದ ಗೀತಾರ್ಥ ವಿವರಣೆ ಇನ್ನುಳಿದ ಗ್ರಂಥಗಳೂ ತುಂಬ ಮಹತ್ವದ ಗ್ರಂಥಗಳು. ಇವುಗಳ ಸಮಗ್ರ ಅಧ್ಯಯನಕ್ಕೇ ಒಂದು ಆಯುಷ್ಯ ಸಾಲದು. ಇವುಗಳನ್ನು ಹೇಗೆ ಬರೆದನೋ ಆ ಅದ್ಭುತ ಪ್ರತಿಭೆಯ ಅಭಿನವ ಗುಪ್ತ. ಅವನ ಕೃತಿ ರಚನೆಯ ಕಾಲ ೯೯೦ರಿಂದ ೧೦೧೪-೧೫ರ ವರೆಗಿನ ಕಾಲು ಶತಮಾನವೆಂದು ಊಹಿಸಲಾಗಿದೆ. ಈ ಕಾಲು ಶತಮಾನದಲ್ಲಿ ಕಾಲಾನುಕಾಲಕ್ಕೆ ಬೆಳಕು ಬೀರುವ ಇಷ್ಟೊಂದು ಕೃತಿಗಳನ್ನು ರಚಿಸಿದ ಇವನು ಮಹಾಮಹೇಶ್ವರ, ಸರ್ವಶೈವ ಸಮಯಾಚಾರ್ಯ, ಭೈರವಾವತಾರಿ ಎಂದು ಸಂಸ್ತುತ್ಯನಾದುದು ಅಚ್ಚರಿಯೇನಲ್ಲ.

'ಶರಣರ ಮಹಿಮೆಯನ್ನು ಅವರ ಮರಣದಲ್ಲಿ ನೋಡು' ಎಂಬ ಗಾದೆಯೊಂದಿದೆ. ಅಭಿನವಗುಪ್ತನ ಜೀವನವೆಷ್ಟು ಗರಿಮಾಮಯವೋ ಅವನ ಮರಣವೂ ಅಷ್ಟೇ ಮಹಿಮಾಮಯ. ಕಾಶ್ಮೀರದ ಪಂಡಿತ ಕುಟುಂಬಗಳಲ್ಲಿಯೂ, ಕೆಲವು ಮುಸ್ಲಿಂ ಕುಟುಂಬಗಳಲ್ಲಿಯೂ ಪ್ರಚಲಿತವಿರುವ ವದಂತಿಯಂತೆ 'ಇದೇ ನನ್ನ ಕೊನೆಯ ಭವ'ವೆಂದು ಹೇಳಿಕೊಂಡಿದ್ದ ಅಭಿನವಗುಪ್ತನು ಒಂದು ದಿನ ಎಂದಿನಂತೆ ಅಹ್ನಿಕಗಳನ್ನು ಮುಗಿಸಿ ತನ್ನ ಸಿದ್ಧಾಂತ, ವಾಮ, ಭೈರವ, ಯಾಮಲ, ಕೌಲ, ತ್ರಿತೇತ್ಯಾದಿ ಸರ್ವಶೈವಶಾಖೆಗಳ ಹನ್ನೆರಡು ನೂರು ಶಿಕ್ಷಕರೊಡನೆ ಭೈರವ ಗುಹೆಯನ್ನು ಪ್ರವೇಶಿಸಿದ. ಮತ್ತೆ ಮರಳಲಿಲ್ಲ. ಈ ಗುಹೆ ಇನ್ನೂ ಇದೆ. ಶ್ರೀನಗರ ಗುಲಮಾರ್ಗಗಳ ಮಧ್ಯದಲ್ಲಿದೆ. ಅದರ ಬದಿಯ ಹಳ್ಳ ಮತ್ತು ಗುಹೆಯಿರುವ ಬೆಟ್ಟದ ಬದಿಯಲ್ಲಿ ಹರಿಯುವ ಹೊಳೆ-ಎರಡಕ್ಕೂ 'ಭೈರವ' ಎಂಬ ಹೆಸರೇ ಇದೆ. ಬಹಳ ಎತ್ತರದಲ್ಲಿ ಗುಹೆಯ ಬಾಯಿ ಇದೆ. ತುಂಬ ಚಿಕ್ಕದಾದ ಅದರಲ್ಲಿ ಒಬ್ಬ ಮನುಷ್ಯ ಬಹು ಪ್ರಯಾಸದಿಂದ ಪ್ರವೇಶಿಸಬಲ್ಲ. ತೆವಳಿಕೊಂಡು ಒಳಗೆ ಹೋದಂತೆಲ್ಲ ಒಬ್ಬರೇ ಕುಳಿತು ಧ್ಯಾನ ಮಾಡಬಲ್ಲ ಗೂಡುಗಳು ಇವೆ. ಒಂದೆಡೆ ಮಾತ್ರ ನಾಲ್ವತ್ತು ಐವತ್ತು ಜನ ಕುಳಿತುಕೊಳ್ಳುವಷ್ಟು ವಿಶಾಲವಾದ ಸ್ಥಳವಿದೆ. ಗುಹೆಯಲ್ಲಿ ಬಹುದೂರದಲ್ಲಿ ಹೋರೊಂದು ತೋರುತ್ತದೆ. ಮಗು ಮಾತ್ರ ಹೋಗಬಹುದಾದ ಹೋರು. ಅಭಿನವಗುಪ್ತ ಅದರೊಳಗಿಂದ ಹೊರಟು ಹೋದನೆಂದು ಹೇಳುತ್ತಾರೆ. ಎಲ್ಲಿಗೆ? ಇನ್ನೆಲ್ಲಿಗೆ? ಶಿವನಲ್ಲಿಗೆ!

ಪ್ರೊ|| ಕಾಂತಚಂದ್ರ ಪಾಂಡೇ ಅವರ ಈ ಮಾತುಗಳಲ್ಲಿ ಅಭಿನವಗುಪ್ತನ ವ್ಯಕ್ತಿತ್ವ ಮನೋಜ್ಞವಾಗಿ ಮೂಡಿಬಂದಿದೆ: 'Thus, noble was his birth, loving and gentle his temper, honest and rigorous his life, strong and admirable his character, brilliant and highly useful his career, memorable and lasting his contribution to both poetics and philosophy, and glorious was the last scene of his earthly existence when, like Tennyson's legendary king Arthur, he parted from his followers never to be seen again...'

ಅಭಿನವಗುಪ್ತಸಾಹಿತ್ಯದ ಅಧ್ಯಯನ ವ್ಯಾಪಕವಾಗಿ ನಡೆಯಬೇಕು. ಅದರಿಂದ ಇಂದಿಗೆ ಪ್ರಸ್ತುತವೆನಿಸುವ ಅನೇಕ ಅಂಶಗಳನ್ನು ಉಳಿಸಿ ಬೆಳೆಸಿಕೊಳ್ಳಬೇಕು.

## ಬುದ್ಧಿಮಾತು

-ಎಚ್. ಎಲ್. ನಾಗೇಗೌಡ

ಬುದ್ಧಿವಂತನಾಗೊ ಬುದ್ಧೀಲಿ
ಭೂಪತಿಯಾಗೊ
ರುದ್ರಾಕ್ಷಿಯಾಗೊ ಕೊರಳೀಗೆ- ನನ್ನಯ್ಯ
ಬಲವಂತನಾಗೊ ಧರೆಯಲ್ಲಿ

ಇದ್ದರೆ ಇರಬೇಕು ಬುದ್ಧಿವಂತರ ನೆರೆಯು
ಖುದ್ದರಗೇಡಿ ಕುಲಗೇಡಿ- ನೆರೆಯಿದ್ದು
ಇದ್ದಷ್ಟು ಬುದ್ಧಿ ಕಳಕೊಂಡ

ಹತ್ತು ಸಾವಿರವಾಗು ಕಿತ್ತಳೆ ವನವಾಗು
ಬಪ್ಪರಿಗೆ ತೌರ ಮನೆಯಾಗು- ತಮ್ಮಯ್ಯ
ಹತ್ತು ಸಾವಿರವಾಗಿ ಸುಖ ಬಾಳು

ಅಡಿಗೆ ಮನಿಯಾಗೆ ಮಡದೀಯ ಸುಳಿವಿಲ್ಲ
ಅಡಿಗೆ ಬಾಯಿಗೆ ರುಚಿಯಿಲ್ಲ ಹಡದವ್ವ
ಮಡದಿ ಕರಸೆ ಬ್ಯಾಗಾನೆ

ಸೂಳೆಗೆ ಹೋದವನು ಏನಾದ ಎಂತಾದ
ಕಾಡುನಾಯಾದ ಕಪಿಯಾದ- ಆ ಮುರುವ
ಸೂಳೆ ಕಾಲಿಗೆ ಕೆರವಾದ

ಮಡದೀನ ಬಡಿದಾನೆ ಮನದಾಗೆ ಮರುಗ್ಯಾನೆ
ಒಳಗ್ಹೋಗಿ ಸೆರಗ ಹಿಡಿದಾನೆ- ಹಿಡಿದು
ಕೇಳ್ಯಾನೆ
ನಾ ಹೆಚ್ಚೊ ನಿನ್ನ ತವರೆಚ್ಚೊ

ತಾಯಿದ್ದರೆ ತವರ್ಹೆಚ್ಚು ತಂದಿದ್ದರೆ ಬಳಗ್ಹೆಚ್ಚು
ನೀನ್ಹೆಚ್ಚು ಎಲ್ಲದಕು ನನ್ನ ರಾಯ

ಹಾಸಿಗೆ ಹಾಸೆಂದ ಮಲ್ಲೀಗೆ ಮುಡಿಯೆಂದ
ಬ್ಯಾಸತ್ತರೆ ಮಡದಿ ಮಲಗೆಂದ- ನನ್ನ ರಾಣಿ
ನನ್ನ ನೋಡಿ ತವರು ಮರೆಯೆಂದ

ಸರದಾರ ನಿನ್ನಿಂದ ಸರುವೆಲ್ಲ ಮರತೇನು
ಸರದಾಗೆ ಇರುವ ಗುಳಿದಾಳಿ- ನಿನ್ನಿಂದ
ಸರುವ ಬಳಗೆಲ್ಲ ಮರೆತೇನ

(ಹಳ್ಳಿಗರು ಅನಕ್ಷರಸ್ಥರು, ಆದರೂ ವಿದ್ಯಾವಂತರು, ಬುದ್ಧಿವಂತರು, ಅವರ ಬಾಷೆ ಸರಳ, ಮಾತು ನೇರ. ಅರ್ಥಮಾಡಿಕೊಳ್ಳಲು ನಿಘಂಟು ಹುಡುಕಬೇಕಾಗಿಲ್ಲ. ಕಂಡು, ಕೇಳಿ, ಅನುಭವಿಸಿ ಸರ್ವಕಾಲಕ್ಕೂ ಅನ್ವಯಿಸುವಂಥ ಅವರ ನುಡಿಮುತ್ತುಗಳನ್ನು 1000 ಗಂಟೆ ಗಳಷ್ಟು ಕೇಳಬಹುದಾದ ನನ್ನ ಧ್ವನಿಭಂಡಾರ ದಿಂದ ಆಯ್ದು ಓದುಗರಿಗೆ ಒಪ್ಪಿಸಿರುವೆ.)